**ಸಾಕ್ಷಿಯನ್ನು ದಿಃ 06.12.2021 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 1(ಎ) ಮತ್ತು 1(ಬಿ) ಪರ ಶ್ರೀ ಬಿ.ಬಿ. ವಕೀಲರಿಂದಃ**

ನನ್ನ ಮುಖ್ಯಾ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವ ಸಂಗತಿಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಎಲ್ಲಾ ವಿಷಯಗಳು ನನಗೆ ಗೊತ್ತಿರುತ್ತದೆ. ನಿಡಿ. 8 ರ ದಾಖಲೆಯನ್ನು ನ್ಯಾಯಾಲಯಕ್ಕೆ ನಾನೇ ಹಾಜರು ಪಡಿಸಿರುತ್ತೇನೆ. ನಿಡಿ. 8 ರಲ್ಲಿ ತಕರಾರು 37/2005-06 ಉಪತಹಶೀಲ್ದಾರ್ ರವರ ನ್ಯಾಯಾಲಯದ ಆದೇಶದಂತೆ ನಮೂದಾಗಿರುತ್ತದೆ ಎಂದರೆ ಸರಿ. ಭವರ್ ಲಾಲ್ ರವರು ದಿಃ 03.01.2007 ರಲ್ಲಿ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಭವರ್ ಲಾಲ್ ರವರು ದಾವ ಸ್ವತ್ತನ್ನು ಖರೀದಿಸುವಾಗಿ ಸದರಿ ಮಾಹಿತಿ ಪಹಣಿ ಪತ್ರಿಕೆಯಲ್ಲಿ ನಮೂದಾಗಿರುವುದನ್ನು ನೋಡಿರುತ್ತೇವೆ. ಸರ್ವೇ ನಂ. 24/1, 1 ಎಕರೆ 37 ಗುಂಟೆ ಜಮೀನಿನ ಕಂದಾಯ ದಾಖಲಾತಿ ಮರಿದೇವಮ್ಮನ ಹೆಸರಿಗೆ ಇದ್ದ ಬಗ್ಗೆ ನಾನು ದಾಖಲಾತಿಯನ್ನು ನೋಡಿರುವುದಿಲ್ಲ ಮತ್ತು ಸದರಿ ಜಮೀನು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂ. 25/1 ಆಸ್ತಿಯು ಮರಿದೇವಮ್ಮನ ತಂದೆಯ ಹೆಸರಿನಲ್ಲಿತ್ತು ಎಂಬ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ಹೇಳಿದಂತೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಸರ್ವೇ ನಂ. 24/1 ರಲ್ಲಿ 30 ಗುಂಟೆ ಜಮೀನು 1 ನೇ ಪ್ರತಿವಾದಿಗೆ ಮತ್ತು ಸದರಿ ಸರ್ವೇ ನಂಬರ್ ನಲ್ಲಿ 30 ಗುಂಟೆ ಜಮೀನು 2 ನೇ ಪ್ರತಿವಾದಿಗೆ ಮತ್ತು ಸರ್ವೇ ನಂ. 24/1 ರಲ್ಲಿ 17 ಗುಂಟೆ ಜಮೀನು ಹಾಜರು ಸರ್ವೇ ನಂ. 25/1 ರಲ್ಲಿ 12 ಗುಂಟೆ ಜಮೀನನ್ನು 3 ನೇ ಪ್ರತಿವಾದಿಯ ಹೆಸರಿಗೆ ವಿಭಾಗ ಆಗಿರುತ್ತದೆ ಎಂಬ ಬಗ್ಗೆ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಆ ಬಗ್ಗೆ ನಾನು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮೌಖಿಕ ವಿಭಾಗ ಆಗಿರುವ ಬಗ್ಗೆ ನಾನು ಯಾವುದೇ ಹಕ್ಕು ಬದಲಾವಣೆ ಪತ್ರ ನೋಡಿರುವುದಿಲ್ಲ. ಸದರಿ ದಾಖಲೆಯನ್ನು ಕಂದಾಯ ಇಲಾಖೆಯಿಂದ ಪಡೆದುಕೊಳ್ಳುಲು ನನಗೆ

ತೊಂದರೆ ಇರಲಿಲ್ಲ. 2005-2006 ರಲ್ಲಿ ಸರ್ವೇ ನಂ. 18/1 ರ ಕಂದಾಯ ದಾಖಲಾತಿಗಳು ಡೊಳ್ಳಯ್ಯ, ತಿಮ್ಮಣ್ಣ, ಕರೀಗೌಡ, ಸ್ವಾಮಿ ಮತ್ತು ಹೊಂಬಾಳಮ್ಮ ನವರ ಜಂಟಿ ಖಾತೆ ಇತ್ತು ಎಂದರೆ ಸರಿ. ಸಾಕ್ಷಿ ಸ್ವಇಚ್ಛೆಯಿಂದ ಮುಂದುವರೆದು ನಾವು ಅವರ ಪೈಕಿ ಕರೀಗೌಡರ ಭಾಗವನ್ನು ಮಾತ್ರ ಖರೀದಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ದಿಃ 21.07.2006 ರಂದು ಕರೀಗೌಡ ರವರ ಮಗಳ ಕಡೆಯಿಂದ ಟೇಕ್ ಚೆಂದ್ ರವರು ಸರ್ವೇ ನಂ. 18/1 ರಲ್ಲಿ 2 ಎಕರೆ 16 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ. ಆ ಸಮಯದಲ್ಲಿ ಸದರಿ ಜಮೀನಿನ ಕಂದಾಯ ದಾಖಲಾತಿಗಳು ಕರೀಗೌಡ ಮಗಳಾದ ಚಿಕ್ಕತಾಯಮ್ಮನ ಹೆಸರಿನಲ್ಲಿ ಇರಲಿಲ್ಲ. ಡೊಳ್ಳಯ್ಯ, ತಿಮ್ಮಣ್ಣ, ಕರೀಗೌಡ, ಸ್ವಾಮಿ ಮತ್ತು ಹೊಂಬಾಳಮ್ಮ ರವರ ಜಂಟಿ ಆಸ್ತಿಯನ್ನು ಟೇಕ್ ಚಂದ್ ರವರು ಕರೀಗೌಡನ ಮಗಳ ಕಡೆಯಿಂದ ಯಾವುದೇ ಅಧಿಕಾರ ಇಲ್ಲದೇ ಕಾನೂನು ಬಾಹಿರವಾಗಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂ. 18/1 ರ ಬಗ್ಗೆ ಕರೀಗೌಡನ ಕುಟುಂಬದಲ್ಲಿ ವಿಭಾಗ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಎಲ್ಲಾ ಒಟ್ಟು ಕುಟುಬಂದ ಆಸ್ತಿಯಲ್ಲಿ ವಿಭಾಗಗಳು ಆಗಿರುತ್ತವೆ ಎಂದು ನುಡಿಯುತ್ತಾರೆ. ಸರ್ವೇ ನಂ. 18/1ರ ಆಸ್ತಿ ಬಗ್ಗೆ ಪ್ರತ್ಯೇಕವಾಗಿ ಯಾವುದೇ ವಿಭಾಗ ಆಗಿರುವುದಿಲ್ಲ ಆದರೆ ಒಟ್ಟು ಕುಟುಬಂದ ಆಸ್ತಿ ವಿಭಾಗ ಆದಾಗ ಸರ್ವೇ ನಂ. 18/1 ಕರೀಗೌಡನ ಮಗಳಾದ ಚಿಕ್ಕತಾಯಮ್ಮನ ಹೆಸರಿಗೆ ಬಂದಿದ್ದು ನಾವು ಅದನ್ನು ಖರೀದಿಸುತ್ತೇವೆ ಎಂದು ನುಡಿಯುತ್ತೇವೆ. ಸದರಿ ವಿಭಾಗ ಮೌಖಿಕ ವಿಭಾಗ ಆಗಿದ್ದು ನನಗೆ ಖಚಿತವಾಗಿ ಹೇಳಲು ಆಗುವುದಿಲ್ಲ. ನಾನು ಹೇಳಿದಂತೆ ಯಾವುದೇ ಮೌಖಿಕ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ರೆವಿನ್ಯೂ ನ್ಯಾಯಾಲಯದಲ್ಲಿ ವಿವಾದ ಚಾಲ್ತಿಯಲ್ಲಿದ್ದಾಗ ಸದರಿ ವಿಚಾರ ಗೊತ್ತಿದ್ದರೂ ಕೂಡ ನಾವು ಕಾನೂನು ಬಾಹಿರವಾಗಿ ಜಮೀನು ಖರೀದಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸರ್ವೇ ನಂ. 18/1 ನ್ನು ಖರೀದಿಸುವ ಸಮಯದಲ್ಲಿ ನಾವು ವಕೀಲರ ಕಾನೂನು ಅಭಿಪ್ರಾಯವನ್ನು ಪಡೆದುಕೊಂಡಿರುತ್ತೇವೆ. ಆ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನಾವು ಜಮೀನು ಖರೀದಿಸುವ ಸಮಯದಲ್ಲಿ ಕಂದಾಯ ಸ್ಕೆಚ್ ಪಡೆದಿರುತ್ತೇವೆ. ಸದರಿ ಜಮೀನನ್ನು ಖರೀದಿ ಮಾಡುವಾಗ ನಾವು

ಷತ್ರಿಕಾ ಪ್ರಕಟಣೆಯನ್ನು ತೆಗೆದುಕೊಂಡಿರುತ್ತೇವೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸರ್ವೇ ನಂ. 18/1 ರ ಜಮೀನಿನಲ್ಲಿ ಪ್ರತಿವಾದಿ 1 ರಿಂದ 3 ರವರು ಈಗ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನನಗೆ ಮಾರಾಟ ಮಾಡುವ ಮಾಲೀಕರಿಂದ ಜಮೀನಿನ ಮೂಲ ಮಾಲೀಕರ ವಂಶವೃಕ್ಷವನ್ನು ಪಡೆದುಕೊಂಡಿರುತ್ತೇವೋ ಇಲ್ಲವೋ ನನಗೆ ನೆನಪಿರುವುದಿಲ್ಲ. ದಾವ ಸ್ವತ್ತನ್ನು ನಾವು ಖರೀದಿಸುವ ಸಮಯದಲ್ಲಿ ಟೇಕ್ ಚಂದ್ ರವರು ದಾವ ಸ್ವತ್ತಿನ ಸ್ವಾಧೀನದಲ್ಲಿ ಇದ್ದರು. ನಾನು ಕಾನೂನು ಪ್ರಕಾರವಾಗಿ ಸದ್ಭಾವನೆಯ(Bonafide) ಖರೀದಿದಾರ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಚಿಕ್ಕಹೆಣ್ಣಮ್ಮನ ಬಗ್ಗೆ ಗೊತ್ತಿಲ್ಲ. ಸದರಿ ಚಿಕ್ಕಹೆಣ್ಣಮ್ಮನಿಗೆ ಯಾವುದೇ ದಾನ ಪತ್ರ ಆಗಿರುವುದಿಲ್ಲ. ಟೇಕ್ ಚೆಂದ್ ರವರಿಂದ ಭವರ್ ಲಾಲ್ ರವರ ಮುಖ್ತ್ಯಾರನಾಮೆಯಾಗಿ ನಾನು ಖರೀದಿ ಮಾಡಿರುವ ಸರ್ವೇ ನಂ. 18/1 ರ ಕ್ರಯ ಪತ್ರ ಪ್ರತಿವಾದಿ 1 ರಿಂದ 3 ರವರಿಗೆ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿ 7 ರಿಂದ 12 ರ ಪರ ಶ್ರೀ ಸಿ.ಎ.ಜಿ. ವಕೀಲರಿಂದಃ**

ಸಮಾಯಾವಕಾಶ ಕೋರಿದ್ದು ನೀಡಲಾಯಿತು.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಸಿ/ಸಿ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.